ಪ್ರೀತಿಯ ಕನ್ನಡ ಬಂಧು,

ಇದೀಗ ರಾಜ್ಯದ ೨೦೯ ಪೌರ ಸಂಸ್ಥೆಗಳ ೪೯೨೦ ವಾರ್ಡ್‌ಗಳಿಗೆ ಚುನಾವಣೆ ನಡೆದಿದೆ. ಈ ಚುನಾವಣೆಯ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರಬೇಕಾದ ಒಂದೆರಡು ವಿಷಯಗಳಿವೆ. ಈ ಚುನಾವಣೆಯಲ್ಲಿ ನಮ್ಮ ರಾಜಕೀಯ ಪಕ್ಷಗಳು ಕಣಕ್ಕೆ ಇಳಿಸಿರುವ ಅಭ್ಯರ್ಥಿಗಳನ್ನು ಆರಿಸುವಾಗ ವಲಸಿಗರ ಮತದ ಮೇಲೆ ಕಣ್ಣಿಟ್ಟು ಪರಭಾಷಿಕರನ್ನು ಆರಿಸಿ ಆ ಜನರನ್ನು ಓಲೈಸುವ ಪ್ರಯತ್ನಗಳು ಹಿಂದೆಂದಿಗಂತಲೂ ಹೆಚ್ಚಿನದಾಗಿ ನಡೆದಿರುವುದು ಕಾಣುತ್ತಿದೆ. ಆಡಳಿತ ವಿಕೇಂದ್ರೀಕರಣ ಅಂದರೆ ನಮ್ಮನ್ನು ನಾವು ಆಳಿಕೊಳ್ಳಬೇಕಲ್ಲವೇ? ಅಂತಹ ಸಂದರ್ಭದಲ್ಲಿ ನಮ್ಮನ್ನು ಪ್ರತಿನಿಧಿಸುವ ವ್ಯಕ್ತಿ ಹೊಟ್ಟೆಪಾಡಿಗೆಂದು ನಮ್ಮೂರಿಗೆ ಗುಳೆ ಬಂದ ಪರಭಾಷಿಕ ಆಗಬೇಕೆ? ಹಾಗೆ ಪರಭಾಷಿಕ ಜನಪ್ರತಿನಿಧಿಯಾದರೆ ನಾಡಿಗೆ ಅದರಿಂದ ಹಾನಿಯಾಗುವುದಿಲ್ಲವೇ?

ನಮ್ಮ ನಾಡಿಗೆ ಹೊಟ್ಟೆಪಾಡಿನ ಉದ್ದೇಶದಿಂದ ವಲಸೆ ಬರುವ ಪರಭಾಷಿಕ ನಮ್ಮ ದೃಷ್ಟಿಯಲ್ಲಿ ಮನೆಗೆ ಬಾಯಾರಿ ಬಂದ ಅತಿಥಿ ಇದ್ದಂತೆ. ನಾವು ತಿನ್ನುವುದರಲ್ಲೇ ಎರಡು ತುತ್ತು ಹಾಕಲೂ ಹಿಂಜರಿಯದ ಗುಣ ಕನ್ನಡಿಗರದ್ದು. ನೀರು ಕೇಳಿದವರಿಗೆ ಮಜ್ಜಿಗೆ, ಹಿಡಿಯನ್ನ ಕೇಳಿದವರಿಗೆ ಕರೆದು ಹೊಟ್ಟೆತುಂಬ ಊಟಕ್ಕಿಕ್ಕುವ ಸಹೃದಯತೆ ಕನ್ನಡಿಗರದ್ದು. ಕನ್ನಡಿಗರ ಈ ಸೌಜನ್ಯಶೀಲತೆ ಲೋಕಪ್ರಸಿದ್ಧವಾಗಿದೆ. ವಲಸಿಗನೆಡೆಗೆ ಕನಿಕರ ಹೊಂದಿ ಅವರ ಬದುಕು ನಮ್ಮ ನಾಡಿನ ಮಣ್ಣಿನಲ್ಲಿ ನೆಲೆಗೊಳ್ಳಲು ಅನುಕೂಲವಾಗುವಂತೆ ಕನ್ನಡಿಗರು ಸದಾ ಬದುಕಿದ್ದಾರೆ. ಇಂದು ಈ ನಮ್ಮ ಸದ್ಗುಣಗಳ ಪರಿಣಾಮವೇನಾಗಿದೆಯೆಂದು ಬಲ್ಲಿರೇನು? ಕನ್ನಡನಾಡಿನ ಹೃದಯದಂತಿರುವ ಬೆಂಗಳೂರಿನಲ್ಲಿ ಕನ್ನಡಿಗನ ಇಂದಿನ ಸ್ಥಿತಿ ಏನಾಗಿದೆ? ಇಲ್ಲಿ ನಮ್ಮ ಕನ್ನಡಿಗರ ಬದುಕು ಹೇಗೆ ಕಮರಿಹೋಗುತ್ತಿದೆ ಎಂಬುದನ್ನು ಒಮ್ಮೆ ಗಮನಿಸಿನೋಡಿ. ಕನ್ನಡಿಗ ತನ್ನದೇ ನಾಡಿನಲ್ಲಿ ಉದ್ಯೋಗ, ಉದ್ದಿಮೆಗಳಲ್ಲಿ ಮೂಲೆಗುಂಪಾಗುತ್ತಿದ್ದಾನೆ, ಈ ನಮ್ಮ ಕನ್ನಡ ನಾಡಿರುವುದು ಕನ್ನಡಿಗರಿಗೋ ಅಥವಾ ವಲಸಿಗರಿಗೋ ಎಂದು ಅನುಮಾನ ಮೂಡುವಂತಹ ಪರಿಸ್ಥಿತಿ ಉಂಟಾಗಿದೆ. ಕನ್ನಡಿಗರ ಸಹನಶೀಲತೆಯ ಕಾರಣದಿಂದಲೇ ಈ ಪಿಡುಗು ನಾಡಿನ ಬೇರೆಡೆಗೂ ವ್ಯಾಪಿಸಿದೆ. ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿಯಂತಹ ಕನ್ನಡ ಪ್ರದೇಶಗಳಲ್ಲಿ ಪರಭಾಷಿಕರ ಪ್ರಾಬಲ್ಯ ಕನ್ನಡಿಗರ ಬದುಕನ್ನೇ ಮಣ್ಣು ಮಾಡುವಷ್ಟು ತೀವ್ರವಾಗಿವೆ. ಇಂದು ವಲಸಿಗ ಮುಖ್ಯವಾಹಿನಿಯಲ್ಲಿ ಬೆರೆಯದೆ, ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರಲು ನಾವೇ ಉತ್ತೇಜನ ನೀಡಿದರೆ ವಲಸಿಗ ರಾಜಕೀಯವಾಗಿ ಬೇರೂರುವ ಮೂಲಕ ಅನಿಯಂತ್ರಿತ ವಲಸೆ, ಆಯಕಟ್ಟಿನ ಜಾಗಗಳಲ್ಲಿ ತನ್ನ ಭಾಷಿಕರ ನೇಮಕದ ಪಕ್ಷಪಾತತನಗಳೇ ಅಲ್ಲದೆ ನಾಡು ಒಡೆಯುವ ವಿದ್ರೋಹದ ಧ್ವನಿಗಳನ್ನು ಎತ್ತಿರುವುದನ್ನೂ ನಾವು ಇಲ್ಲೆಲ್ಲಾ ಕಾಣುತ್ತಿದ್ದೇವೆ.

ಬಂಧುಗಳೇ, ನಮ್ಮನ್ನು ಆಳಲಿರುವ ಜನ ಪ್ರತಿನಿಧಿಗಳು ನಮ್ಮವರೇ ಆಗಿರಲಿ. ನಾಡು ನುಡಿಗಳ ಉಳಿವು ಮತ್ತು ಏಳಿಗೆಗೆ ಇದು ಅತ್ಯಂತ ಅವಶ್ಯಕವಾದುದ್ದಾಗಿದೆ. ನೀವು ಪ್ರತಿಬಾರಿ ಮತನೀಡುವಾಗಲೂ, ಕನ್ನಡಿಗರಿಗೇ ಮತ ನೀಡಿ.

ನಿಮ್ಮ ಪ್ರೀತಿಯ ಕನ್ನಡ ಸೇವಕ
ಟಿ. ಎ. ನಾರಾಯಣ ಗೌಡ